**ಸಾಮಾನ್ಯ ಸೂಚನೆಗಳು :**

1. ಇದು ಪ್ರಶ್ನೆ ಸಹಿತ ಉತ್ತರ ಪುಸ್ತಕವಾಗಿದೆ.
2. ಪ್ರತಿ ಪ್ರಶ್ನೆಗೂ ಉತ್ತರ ಬರೆಯಲು ಪ್ರಶ್ನೋತ್ತರ ಪುಸ್ತಕದಲ್ಲಿಯೇ ಸ್ಥಳಾವಕಾಶ ಮಾಡಿಕೊಡಲಾಗಿದೆ. ಉತ್ತರಗಳನ್ನು ನಿರ್ದಿಷ್ಟಪಡಿಸಿದ ಜಾಗದಲ್ಲಿಯೇ ಬರೆಯಬೇಕು.
3. ಈ ಪ್ರಶ್ನೋತ್ತರ ಪುಸ್ತಕವು 54 ಪ್ರಶ್ನೆಗಳನ್ನು ಹೊಂದಿದೆ, ಹೊಂದಿಸಿ ಬರೆಯಿರಿ ಪ್ರಶ್ನೆ ಸೇರಿದಂತೆ.
4. ಪರೀಕ್ಷಾರ್ಥಿಗಳು ಉತ್ತರಗಳನ್ನು ಪೆನ್ಸಿಲ್‌ನಲ್ಲಿ (ಸೀಸದ ಕಡ್ಡಿ) ಬರೆಯಬಾರದು. ಬರೆದರೆ ಅಂತಹ ಉತ್ತರಗಳನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
5. ಬಹು ಆಯ್ಕೆ, ಬಿಟ್ಟ ಸ್ಥಳ ತುಂಬುವ ಮತ್ತೆ ಹೊಂದಿಸುವ ಪ್ರಶ್ನೆಗಳಲ್ಲಿ . ಪರೀಕ್ಷಾರ್ಥಿಗಳು ತಿದ್ದಿ / ಹೊಡೆದು ಬರೆಯುವುದನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕೊಟ್ಟಿರುವ ಜಾಗದಲ್ಲಿ ಪೂರ್ಣವಾಗಿ ಬರೆಯಿರಿ.** **[15 × 1 = 15]**

1. ‘ರತ್ನ’ ಈ ಶಬ್ದದ ತದ್ಭವ ರೂಪ

(A) ರನ್ನ (B) ರತುನ

(C) ರಾತ್ನ (D) ರಥ್ನ

2. ಮಕ್ಕಳು ಮೈದಾನದಲ್ಲಿ ಕುಣಿಯುತ್ತಿದ್ದಾರೆ. ಅಡಿ ಗೆರೆ ಎಳೆದ ಪದದ ಧಾತು

(A) ಕುಣಿಯುತ್ತಾರೆ (B) ಕುಣಿ

(C) ಕುಣಿಯುವರು (D) ಕುಣಿಯುವುದಿಲ್ಲ

3. ‘ಕೇದಾರ’ ಪದದಲ್ಲಿರುವಗಣ.

(A) ‘ರ’ ಗಣ (B) ‘ಭ’ ಗಣ

(C) ‘ತ’ ಗಣ (D) ‘ಜ’ ಗಣ

4. ‘ಕವಿ’ ಶಬ್ದದ ಅನ್ಯಲಿಂಗ ರೂಪ

(A) ಸಾಹಿತಿ (B) ಕವಿತ್ರಿ

(C) ಲೇಖಕಿ (D) ಕವಯಿತ್ರಿ

www.StudyGuideIndia.com

5. ಕರ್ನಾಟಕಕ್ಕೆ ಕಾರಂತರ ಮರು ಪ್ರವೇಶ ಆಯಿತು. ಅಡಿ ಗೆರೆ ಎಳೆದ ಪದದಲ್ಲಿರುವ ವಿಭಕ್ತಿ ಯಾವುದು ?

(A) ಷಷ್ಠೀ (B) ಪ್ರಥಮಾ

(C) ಪಂಚಮೀ (D) ತೃತೀಯಾ

6. ಒಂದು ವಸ್ತುವನ್ನು ಇನ್ನೊಂದು ವಸ್ತುವಿಗೆ ಹೋಲಿಕೆ ಮಾಡಿ ಹೇಳುವ ಅಲಂಕಾರ

(A) ರೂಪಕ (B) ಉತ್ಪ್ರೇಕ್ಷೆ

(C) ದೃಷ್ಟಾಂತ (D) ಉಪಮಾ

7. 'ದುರ್ದೈವ' ಇದರ ವಿರುದ್ಧಾರ್ಥಕ ರೂಪ

(A) ನದೈವ (B) ಸುದೈವ

(C) ಅಸುದೈವ (D) ವಸುದೈವ

8. ವಿಜ್ಞಾನಿ ಸಿ.ವಿ. ರಾಮನ್ ನೋಬೆಲ್ ಪ್ರಶಸ್ತಿ ಪುರಸ್ಕೃತರು. ಈ ವಾಕ್ಯದಲ್ಲಿರುವ ಅನ್ಯ ದೇಶೀಯ ಪದ

(A) ರಾಮನ್ (B) ವಿಜ್ಞಾನಿ

(C) ನೋಬೆಲ್ (D) ಪ್ರಶಸ್ತಿ

9. 'ಭಳೆಗಾರ' ಈ ಪದದ ಶುದ್ಧ ರೂಪ

(A) ಬಳೆಗಾರ (B) ಬಳಿಕಾರ

(C) ಬಳೇಗಾರ (D) ಬಳಿಬಾರ

10. ದ್ವಿರುಕ್ತಿ ಪದವನ್ನು ಗುರುತಿಸಿ.

(A) ಢಣಢಣ (B) ಪಟಪಟ

(C) ಜುಳುಜುಳು (D) ಬೇಗಬೇಗ

11. ಮಗಳೇ, ಇದು ನಿನ್ನ ಪೂರ್ವ ಜನ್ಮದ ಪಾಪದ ಫಲ–ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ

(A) ಉದ್ಧರಣ (B) ಅಲ್ಪವಿರಾಮ

(C) ಪೂರ್ಣವಿರಾಮ (D) ವಿವರಣಾತ್ಮಕ

www.StudyGuideIndia.com

**12.** ಸವರ್ಣದೀರ್ಘ ಸಂಧಿ ಪದವನ್ನು ಗುರುತಿಸಿ

(A) ದಿಗಂತ (B) ದೇವಾಲಯ

(C) ಅತ್ಯಂತ (D) ಚಂದ್ರೋದಯ

**13.** 'ಓದಿದನು' ಈ ಪದದ ವರ್ತಮಾನ ಕಾಲ ರೂಪ

(A) ಓದಲಿ (B) ಓದಿಯಾನು

(C) ಓದುವನು (D) ಓದುತ್ತಾನೆ

**14.** ಅವನು ಶಾಲೆಗೆ ಆಟವಾಡುತ್ತಾ ಹೋಗುತ್ತಿದ್ದಾನೆ. ಈ ವಾಕ್ಯದಲ್ಲಿರುವ ಸರ್ವನಾಮ ಪದ ಗುರುತಿಸಿ.

(A) ಆಟ (B) ಹೋಗು

(C) ಅವನು (D) ಶಾಲೆ

**15.** 'ಕ್ಷಾಮ' ಈ ಪದದ ಸಮಾನಾರ್ಥಕ ಪದ

(A) ಬರ (B) ಬಾರ

(C) ಭರ (D) ಭಾರ

**II. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.** **[5 × 1 = 5]**

**16.** ತುಂಬಿದ ಕೊಡ ______________

**17.** ಲಕ್ಷ್ಮಣ ರಾಯರ ಕಾವ್ಯನಾಮ ____________________

**18.** ಗಾಂಧೀಜಿ ಇಳೆಗೆ ಬೋಧಿಸಿದ ತತ್ವ ______________________________

**19.** ಕುಂಬಾರನಿಗೆ ವರ್ಷ _________________________

**20.** 'ಯುಗಾದಿ' ಪದ್ಯದ ಆಕರ ಕೃತಿ _________________________

www.StudyGuideIndia.com

III. 21. 'ಅ' ಪಟ್ಟಿಯಲ್ಲಿರುವ ವಾಕ್ಯರಣಾಂಶಗಳಿಗೆ ಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ ಕೊಟ್ಟಿರುವ ಸ್ಥಳದಲ್ಲಿ ಬರೆಯಿರಿ. [5 × 1 = 5]

| ಅ | ಬ | ಉತ್ತರಗಳು |
|---|---|---|
| 1) ಲೋಪಸಂಧಿ | ಅ) ಉ | |
| 2) ಅಂಕಿತನಾಮ ಪದ | ಆ) ಬಿತ್ತರ | |
| 3) ಪ್ರಥಮಾ ವಿಭಕ್ತಿ | ಇ) ಕುರುಡ | |
| 4) ತದ್ಭವ ರೂಪ | ಈ) ಪರ್ವತ | |
| 5) ಅನುಕರಣಾವ್ಯಯ | ಉ) ಹಿಮಾಲಯ | |
| | ಊ) ಸರಸರ | |
| | ಋ) ಅನ್ನು | |
| | ಎ) ಊರೂರು | |

www.StudyGuideIndia.com

IV. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** [8 × 1 = 8]

22. ಲೇಖಕಿಯನ್ನು ಕಂಡು ಪ್ರಭಕ್ಕನ ಗೆಳತಿ ಏನೆಂದು ಹೇಳಿದಳು ?

23. 'ದಪ್ಪ' ಅನ್ನೋದಕ್ಕೆ ಧಾರವಾಡದ ಕಡೆ ಏನೆಂದು ಕರೆಯುತ್ತಾರೆ ?

24. ಬಿ.ವಿ. ಕಾರಂತರ ಜನ್ಮ ಸ್ಥಳ ಯಾವುದು ?

25. ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿತ್ತು ?

[P.T.O.]

26. ಪಂಪ ಮಹಾಕವಿ ರಚಿಸಿದ ಕೃತಿಗಳಾವುವು ?

27. ಪುರು ಪರಮೇಶನ ಹಿರಿಯ ಮಗನ ಹೆಸರೇನು ?

28. ಕವಿ ದೊರೆಸ್ವಾಮಿಯವರ ಪ್ರಕಾರ ಹರ್ಷವು ಎಲ್ಲಿ ಅಡಗಿದೆ ?

29. ಬಾಲೆಯ ಹಡೆದವ್ವ ಎಲ್ಲಿ ಪಗಡೆ ಆಡುತ್ತಿದ್ದಳು ?

**V. ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳ ಉತ್ತರ ಬರೆಯಿರಿ.** **[15 × 2 = 30]**

www.StudyGuideIndia.com

30. ತೆನಾಲಿ ರಾಮಕೃಷ್ಣ ಹಸಿವು ಎಂದು ಮನೆಗೆ ಬಂದಾಗ ಆತನ ಮಡದಿ ಗೌರಿಯು ಹೇಳಿದ್ದೇನು ?

31. ಸನ್ಯಾಸಿಯು ಪೂರ್ಣಿಮಾಳ ಸಮಸ್ಯೆಗೆ ಸೂಚಿಸಿದ ಪರಿಹಾರವೇನು ?

32. ಬಿ.ವಿ. ಕಾರಂತರಿಗೆ ಅಭಿನಯದ ಬಗ್ಗೆ ಇದ್ದ ಅಭಿಪ್ರಾಯವೇನು ? ಅದಕ್ಕೆ ನರಹರಿ ಶಾಸ್ತ್ರಿಗಳು ಸೂಚಿಸಿದ ಸಮಾಧಾನ ಏನು ?

33. ತಗಡೂರು ರಾಮಚಂದ್ರರಾಯರನ್ನು 'ಛೋಟಾ ಗಾಂಧಿ' ಎಂದು ಏಕೆ ಕರೆಯುತ್ತಾರೆ ?

34. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನು ?

35. ಬಿ.ವಿ. ಕಾರಂತರು ಮನೆ ಬಿಟ್ಟು ಹೋಗಲು ಕಾರಣವೇನು ?

36. ಗೌರಿಯು ತಿರುಮಲಾದೇವಿಯ ಬಳಿ ದುಃಖದಿಂದ ಏನು ಹೇಳಿದಳು ?

37. 'ಲಾಲ್ ಬಾಗ್' ಸಸ್ಯ ತೋಟದಲ್ಲಿರುವ ನೋಡತಕ್ಕ ಸ್ಥಳಗಳಾವುವು ?

38. ಪ್ರಾಚೀನ ಕವಿಗಳನ್ನು 'ಜೀವನದಿ' ಪದ್ಯದಲ್ಲಿ ಯಾವ ಹೋಲಿಕೆಗಳೊಂದಿಗೆ ಪರಿಚಯಿಸಲಾಗಿದೆ.

39. ತೀ.ನಂ. ಶ್ರೀಕಂಠಯ್ಯನವರು 'ಗಾಂಧಿ' ಪದ್ಯದಲ್ಲಿ ಗಾಂಧೀಜಿಯವರನ್ನು ಯಾವ ಯಾವ ವಿಶೇಷಣಗಳೊಂದಿಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದಾರೆ ?

40. ಬಳೆಗಾರ 'ತೋರು ಬಾರೆ ತವರೂರು ' ಎಂದು ಬಾಲೆಯನ್ನು ಕೇಳಲು ಕಾರಣವೇನು ?

41. ಧ್ಯಾನವೆಂಬ ಅಗ್ನಿಯು ಏನನ್ನು ಧಹಿಸುತ್ತದೆಂದು ಆಧುನಿಕ ವಚನಗಳಲ್ಲಿ ತಿಳಿಸಲಾಗಿದೆ ?

42. ಈರಣ್ಣ ಇಟಗಿಯವರು ಏನನ್ನು ಕಂಡು ಬೆರಗಾಗಿದ್ದಾರೆ ?

43. ಬಾಲೆಯು ಬಳೆಗಾರನಿಗೆ ತನ್ನ ತವರು ಮನೆಯ ಗುರುತುಗಳನ್ನು ಹೇಗೆ ತಿಳಿಸಿದಳು ?

44. ಭರತ ಚಕ್ರವರ್ತಿ ಸಿಂಹಾಸನದ ಮೇಲೆ ಹೇಗೆ ಶೋಭಿಸುತ್ತಿದ್ದನು ?

**VI. ಕೆಳಗಿನ ಹೇಳಿಕೆಗಳ ಸಂದರ್ಭವನ್ನು ಕೃತಿ, ಕರ್ತೃ ಸಹಿತ ವಿವರಿಸಿರಿ.** **[4 × 3 = 12]**

45. ''ಬೆಹನ್ ಜೀ, ವೋ ದೇಖೊ ಕೇದಾರ್ ಜೀ ಕಾ ಮಂದಿರ್''.

46. 'ನೀರಿನ ತಳವೇ ನಿನಗೆ ತವರು, ಬಾ''

47. 'ಕೋಣೆಯನ್ನು ಮನೆ ಎಂದು ತಿಳಿದು ಬನ್ನಿ'

48. 'ತುಂಬಲಿಲ್ಲವೇ ಬಡವರ ಬಸಿರು'

**VII. ಈ ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ :** **[1 × 3 = 3]**

49. ಕಣ್ಣು ಕೈ ಕಾಲ್ ________________________________

________________________________________________

________________________________________________

________________________________ ಇರುವರೆ ಖೋಡಿ.

**ಅಥವಾ**

ಸುಳಿ ಮಿಂಚಿನ ________________________________

________________________________________________

________________________________________________

________________________________ ರತ್ನಾಕರನ ಕೆರೆ.

[P.T.O.]



www.StudyGuideIndia.com

**VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡನ್ನು ಕುರಿತು 8-10 ವಾಕ್ಯಗಳ ಉತ್ತರ ಬರೆಯಿರಿ. [2 × 4 = 8]**

- ಭರತ ಕುಮಾರನು ತನ್ನ ಸುತ್ತಮುತ್ತಲಿನ ಪ್ರಕೃತಿಯಲ್ಲಿ ತಾಯಿಯನ್ನು ಕಂಡು ಕೊಂಡ ಬಗೆ ಹೇಗೆ ? ವಿವರಿಸಿ.
- ಜಲಮಟ್ಟ ವರ್ಷದಿಂದ ವರ್ಷಕ್ಕೆ ಕುಸಿಯಲು ಕಾರಣವೇನು ?
- ಕೇದಾರನಾಥದ ಬಗ್ಗೆ ಇದ್ದ ವಿಚಿತ್ರವಾದ ಪುರಾಣ ಕಥೆಯನ್ನು ತಿಳಿಸಿ.

**50.**

**51.**

**IX. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

**[1 × 4 = 4]**

- ಹಡಗಿನ ಅಂದ-ಚಂದದ ಬಗೆಗೆ ಗೋಕಾಕರು ನೀಡಿದ ವಿವರಣೆ ಸಂಗ್ರಹಿಸಿ.
- ಶಾಂತಾದೇವಿ ಕೆ. ಸಾಬಾದಿಯವರು ದೇಹವನ್ನು ಅಚ್ಚು ಮುರಿದ ಹಾಳು ಬಂಡಿ ಎಂದು ಕರೆಯಲು ಕಾರಣವೇನು ?

**52.**

**X. 53. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. [1 × 5 = 5]**

- ಪ್ರವಾಹ ಸಂತ್ರಸ್ಥರಿಗೆ ನೀವು ಕೈಗೊಳ್ಳುವ ಪರಿಹಾರೋಪಾಯಗಳು.
- ದೂರ ದರ್ಶನದಿಂದ ದೊರೆಯುವ ಪ್ರಯೋಜನಗಳು.
- ಸ್ವತಂತ್ರ ದಿನಾಚರಣೆಯ ಮಹತ್ವ

www.StudyGuideIndia.com

**XI. 54.** ನೀವು ಬೀದರ್ ಸರಕಾರಿ ಪ್ರೌಢ ಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ರಮ/ರಮಾ ಎಂದು ತಿಳಿದು ವರ್ಗಾವಣೆ ಪತ್ರ (ಟಿ.ಸಿ)ವನ್ನು ನೀಡುವಂತೆ ಮುಖ್ಯೋಪಾಧ್ಯಾಯರಿಗೆ ಅರ್ಜಿ ಬರೆಯಿರಿ.

**ಅಥವಾ**

ನಿಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಬರುವಂತೆ ಆಹ್ವಾನಿಸಿ ಮೈಸೂರಿನ ಚೌಡೇಶ್ವರಿ ಬೀದಿಯಲ್ಲಿರುವ ನಿನ್ನ ಗೆಳೆಯ/ಗೆಳತಿ ಸುರೇಶ/ಸುರೇಖಳಿಗೆ ಒಂದು ಪತ್ರ ಬರೆಯಿರಿ. **[1 × 5 = 5]**

www.StudyGuideIndia.com